ಅಧ್ಯಕ್ಷರು:- ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

1) ಮಾಸೂರು ಗ್ರಾಮದಲ್ಲಿ ಪಡಿತರ ಸಕ್ಕರೆಯ ಕಳ್ಳ ಮಾರಾಟ

ಶ್ರೀ ಕೆ. ಎಸ್. ಈಶ್ವರಪ್ಪ:- ಸನ್ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಟಿ.ಎ.ಪಿ.ಸಿ.ಎಂ.ಎಸ್.ಗಳು ಮತ್ತು ಸ್ಯಾಯಬೆಲೆ ಅಂಗಡಿಗಳಲ್ಲಿ ಅನೇಕ ಕಡೆ ಸಕ್ಕರೆ, ಎಣ್ಣೆ ಈ ರೀತಿ ಬಳಕೆದಾರರು ಬಳಸುವಂಥ ವಸ್ತುಗಳನ್ನು ಕದ್ದು ಮಾರಾಟ ಮಾಡುವುದು ಸರ್ವೇ ಸಾಮಾನ್ಯವಾಗಿದೆ. ಇಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ರೀತಿಯ ಸವಾಲು ರೂಪದಲ್ಲಿ ಒಂದು ಉದಾಹರಣೆಯನ್ನು ಕೊಡುತ್ತಿದ್ದೇನೆ. ಇವತ್ತು ಅನೇಕ ಉತ್ಸಾಹಿ ಯುವಕರು, ಈ ರೀತಿ ಕದ್ದು ಮಾರಾಟ ಮಾಡುತ್ತಿದ್ದು, ಮೂರು ಚೀಲ ಸಕ್ಕರೆಯನ್ನು ಹೊಡೆದು, ಹಿರೇಕೆರೂರು ತಾಲ್ಲೂಕು ಮಾಸೂರು ಗ್ರಾಮದಲ್ಲಿ ಕೊಟ್ಟಿದ್ದಾರೆ. ಇದನ್ನು ಸರ್ಕಾರದವರು ಯಾವ ರೀತಿಯಾಗಿ ಚಾಲೆಂಜ್ ಆಗಿ ಸ್ವೀಕಾರ ಮಾಡಿ, ಸಂಬಂಧಪಟ್ಟ ಟಿ.ಎ.ಪಿ.ಸಿ.ಎಂ.ಎಸ್. ಅಧಿಕಾರಿಗಳ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಹೇಳಬೇಕು. ದಿನಾಂಕ: 5-3-93ರಂದು ಶುಕ್ರವಾರ ರಾತ್ರಿ 8-30ಕ್ಕೆ ಟಿ.ಎ.ಪಿ.ಸಿ.ಎಂ.ಎಸ್.ನಿಂದ 3 ಚೀಲ ಸಕ್ಕರೆ ಹೊರಗಡೆ ಹೋಗುತ್ತಿರುವುದನ್ನು.....

ಒಬ್ಬ ಸದಸ್ಯರು:- ಆ ಕಡೆಯಲ್ಲಿ ಸಂಬಂಧಪಟ್ಟ ಮಂತ್ರಿಗಳು ಇಲ್ಲ.....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:- ಮಂತ್ರಿಗಳು ಯಾರೂ ಇಲ್ಲ ಎಂದರೆ ನಾನೇನು ಮಾಡಲಿ, ನನ್ನ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಆರ್. ಪಿ. ದೇಶಪಾಂಡೆ:- ತಾವು ನಮಗೆ ಅವಕಾಶ ಕೊಡುತ್ತೀರಿ. ತಾವು ಅವಕಾಶ ಕೊಟ್ಟಾಗ, ಇಲ್ಲಿ ಕೇಳುವವರು, ಯಾರೂ ಇಲ್ಲ. ಯಾವುದೇ ಮಂತ್ರಿಗಳು ಇಲ್ಲ. ಯಾವ ಕಡೆ ಚರ್ಚೆಯಾಗುತ್ತಿದೆ, ಯಾವ ವಿಷಯದ ಚರ್ಚೆಯಾಗುತ್ತಿದೆ ಎನ್ನುವುದನ್ನು ಕೇಳುವವರೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಈ ವಿಷಯವನ್ನು ಅನೇಕ ಸಂದರ್ಭದಲ್ಲಿ ಈ ಸದನದಲ್ಲಿ ಹೇಳುತ್ತಿದ್ದೇವೆ. ಸಚಿವರು ಇಲ್ಲದಿದ್ದರೆ, ಇಲ್ಲಿಯ ಪರಿಸ್ಥಿತಿ ಏನು ? ನಾವು ಯಾರ ಮುಂದೆ ಹೇಳಬೇಕು. ಪ್ರತಿಯೊಂದು ವಿಷಯಗಳಿಗೂ, ಇಲ್ಲಿ ಯಾರೂ ಒಬ್ಬರೂ ಇಲ್ಲ. ಎಲ್ಲದಕ್ಕೂ ಉಪ ಮುಖ್ಯಮಂತ್ರಿಗಳೇ ಹೇಳಬೇಕು. ಇದೆಂಥ ನಿಯಮ, ಇದು ಸರಿಯಲ್ಲ. ಈ ಸಭೆಯ ಘನತೆಗೆ ಸರಿಯಲ್ಲ. ಇವತ್ತು ಆಹಾರ ಮಂತ್ರಿಗಳು ಅಥವಾ ಸಂಬಂಧಪಟ್ಟ ಮಂತ್ರಿಗಳು ಗಂಭೀರವಾಗಿ ಕಾಲ್ತುಕೊಳ್ಳಬೇಕು, ಸಂಬಂಧಪಟ್ಟ ವಿಚಾರವನ್ನು ಕೇಳಬೇಕು. ಅದು ಬಿಟ್ಟು ಎಲ್ಲವನ್ನೂ ಒಬ್ಬರ ಮೇಲೆ ಹೊರಿಸುವುದು ಸಂತೋಷ ತರುವ ವಿಷಯವಲ್ಲ. ಮತ್ತು ಈ ಸದನಕ್ಕೆ ಗೌರವ ತರುವಂಥ ವಿಷಯವಲ್ಲ.

ಶ್ರೀ ಎಸ್.ಎಂ. ಕೃಷ್ಣ:- ಮಾನ್ಯ ಅಧ್ಯಕ್ಷರೇ, ತಾವು ದಯಮಾಡಿ ಸರ್ಕಾರಕ್ಕೆ ಸೂಕ್ತ ನಿರ್ದೇಶನ ಕೊಡಬೇಕು. ಆಹಾರ ಮಂತ್ರಿಗಳಿಗೆ ಸಂಬಂಧಪಟ್ಟ ಹಾಗೆ ಮಾನ್ಯ ಈಶ್ವರಪ್ಪನವರು ಏನು ಪ್ರಸ್ತಾವನೆ ಮಾಡಿದ್ದಾರೆ, ಅದನ್ನು ನಮಗೆ ಮೊದಲೇ ತಿಳಿಸಿದ್ದರೆ, ನಾವು ಆಹಾರ ಮಂತ್ರಿಗಳನ್ನು ಇಲ್ಲಿಗೆ ಕರೆಸುತ್ತಿದ್ದೆವು, ಅವರು ಈಗ ವಿಧಾನಪರಿಷತ್ತಿನಲ್ಲಿರಬಹುದು....

ಶ್ರೀ ಬಸವರಾಜ ರಾಯರೆಡ್ಡಿ:- ಇಲ್ಲಿ ಸಭೆ ನಡೆಯುವಾಗ, ಮಂತ್ರಿಗಳಿಗೆ ಬೇರೆ ಕಾರ್ಯಕ್ರಮ ಏನಿದೆ ?

ಶ್ರೀ ಎಸ್. ಎಂ. ಕೃಷ್ಣ:– ನಾನು ತಮ್ಮಿಂದ ಡೈರಕ್ಷನ್ ಕೇಳಿದ ಉದ್ದೇಶ ಇಷ್ಟೆ. ನಿಮ್ಮ ಕಾರ್ಯವನ್ನು ಹಗುರ ಮಾಡಿಕೊಡಬೇಕೆಂಬುದು ಸರ್ಕಾರದ ಇಚ್ಛೆ. ಪ್ರಶ್ನೋತ್ತರವಾದ ತಕ್ಷಣ ಇಂತಿಂಥ ವಿಷಯಗಳು ಬರತಕ್ಕ ಸಾಧ್ಯತೆ ಇದೆಯೆಂದು ನಮಗೆ ಮೊದಲೇ ತಮ್ಮ ಆಫೀಸಿನಿಂದ ಸೂಚನೆ ಬಂದರೆ, ನಾವು ಸಂಬಂಧಪಟ್ಟವರಿಗೆ ಇರುವುದಕ್ಕೆ ಹೇಳಬಹುದು. ಏಕೆಂದರೆ, ಈಗ ಎರಡು ಸದನಗಳೂ ನಡೆಯುತ್ತಿವೆ. ಕೋಆರ್ಡಿನೇಷನ್ ಬಹಳ ಕಷ್ಟವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಉಪಮುಖ್ಯಮಂತ್ರಿಗಳು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಆದರೆ, ಬಂದು ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಈ ವಿಷಯವನ್ನು ನಾವು ಮುಂಚಿತವಾಗಿ ಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಏಕೆಂದರೆ ಅವರು ಕಾಲಾವಕಾಶ ಮಾಡಿಕೊಳ್ಳಲಿ ಎಂದು. ಅದಕ್ಕಾಗಿ ನಾವು ನಿನ್ನೆಯ ದಿವಸ ನಮ್ಮ ಸೂಚನೆಯನ್ನು ಇಲಾಖೆಗೆ ಕಳುಹಿಸಿದ್ದೇವೆ. ಮುಂಚಿತವಾಗಿ ತಿಳಿಸಿದರೂ ಸಹ ಸಚಿವರು ಬಂದಿಲ್ಲವೆಂದು ಹೇಳುತ್ತಿದ್ದಾರೆ. ಜೀರೋ ಅವರ್‌ನಲ್ಲಿ ವಿಷಯ ಎತ್ತುತ್ತೇವೆ ಎಂದು ಒಂದು ಗಂಟೆ ಮುಂಚಿತವಾಗಿ ತಿಳಿಸುತ್ತೇವೆ. ಇದಕ್ಕಿಂತ ಮುಖ್ಯವಾದ ಕೆಲಸ ಏನು ಸಚಿವರಿಗೆ ? ಜೀರೋ ಅವರ್‌ನಲ್ಲಿ ಮಹತ್ತರವಾದ ವಿಷಯ ಬಂದಾಗ ತಕ್ಷಣ ಅದಕ್ಕೆ ಉತ್ತರ ಕೊಡುವಂತಹ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಉತ್ತರ ತರಿಸಬಹುದು. ಇಲ್ಲಿ ತಾವು ದಾಖಲೆಗಳನ್ನು ನೋಡಿ ಜೀರೋ ಅವರ್‌ನಲ್ಲಿ ಮಹತ್ತರವಾದ ವಿಷಯಗಳು ಬಂದಾಗ ಆ ಸಮಯದಲ್ಲಿ ನಾವು ನೋಡಿರತಕ್ಕಂಥಾದ್ದು ನಮ್ಮ ಅನುಭವಕ್ಕೆ ಬಂದಿರತಕ್ಕಂಥಾದ್ದು ಜೀರೋ ಅವರ್‌ನಲ್ಲಿ ಸಂಬಂಧಪಟ್ಟ ಎಲ್ಲಾ ಸಚಿವರು ಕುಳಿತುಕೊಂಡು ಪ್ರಮುಖವಾದ ವಿಷಯಗಳನ್ನು ಗಮನಿಸಿ ಉತ್ತರ ಕೊಡತಕ್ಕಂಥ ವಾತಾವರಣ ಇಲ್ಲವೇ ಇಲ್ಲ. ಇತ್ತೀಚಿನ ದಿನಗಳಲ್ಲಿ ಪ್ರಶ್ನೋತ್ತರ ವೇಳೆಯಾದ ನಂತರ ಜೀರೋ ಅವರ್‌ನಲ್ಲಿ ಪ್ರಮುಖವಾದ ವಿಷಯಗಳು ಚರ್ಚೆಗೆ ಬಂದಾಗ ಸಂಬಂಧಪಟ್ಟ ಯಾವುದೇ ಸಚಿವರು ಇಲ್ಲದೆ ಈ ಸದನದ ಕಾರ್ಯಕಲಾಪಗಳಿಗೆ ಅಪಮಾನ ಮಾಡುತ್ತಿದ್ದಾರೆ. ಎಂದು ಹೇಳುವುದರಲ್ಲಿ ನಾನು ಹಿಂದೆ ಮುಂದೆ ನೋಡುವುದಿಲ್ಲ. ತಾವು ಅವರಿಗೆ ಸೂಚನೆ ಕೊಡಬೇಕಾಗುತ್ತದೆ; ನಾವು ಜೀರೋ ಅವರ್‌ನಲ್ಲಿ ಈ ವಿಷಯ ಎತ್ತುತ್ತೇವೆ ಎಂದು ನಿನ್ನೆಯ ದಿವಸ ಕಳುಹಿಸಿದ್ದೇವೆ. ಇಲ್ಲದಿದ್ದರೆ ಇದು ನಿಮ್ಮ ಮೇಲೆ ಆಪಾದನೆ ಬರುತ್ತದೆ. ಅದನ್ನು ನಾವು ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ. ನಾವು ನಿಮ್ಮ ಕಡೆ ಕೊಟ್ಟಿದ್ದೆವು. ನೀವು ಇಲಾಖೆಗೆ ಕಳುಹಿಸಿದ್ದೀರಿ. ಸಂಬಂಧಪಟ್ಟ ಸಚಿವರು ಇಲ್ಲ. ದಯಮಾಡಿ ಸರ್ಕಾರದ ವರ್ತನೆ, ಬಗ್ಗೆ ಕ್ಷಮಾಪಣೆ ಕೇಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಇದು ಅನೇಕ ಬಾರಿ ಆಗಿದೆ. ಮಾನ್ಯ ಮಂತ್ರಿಗಳು ಸದನಕ್ಕೆ ಬರಬೇಕೆಂದು ಸೂಚನೆ ಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಎಷ್ಟೋ ಸಾರಿ ಈ ಸದನಕ್ಕೆ ಸಂಬಂಧಪಟ್ಟ ಸಚಿವರು ಬರುವುದಿಲ್ಲ.

ಅಧ್ಯಕ್ಷರು:– ತಾವು ಕುಳಿತುಕೊಳ್ಳಿ. ನಾನು ಸೂಕ್ತ ಏರ್ಪಾಡು ಮಾಡುತ್ತೇನೆ.

SRI BASAVARAJ RAYA REDDY:– Chair can take action against Ministers, please.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಉಪ ಮುಖ್ಯಮಂತ್ರಿಗಳು ಮುಂಚಿತವಾಗಿ ಸೂಚನೆಯನ್ನು ತಿಳಿಸಬೇಕೆಂದು ಏನು ಹೇಳಿದ್ದಾರೆ. ಅದು ಒಳ್ಳೆಯ ಸಲಹೆ. ಆದರೆ ಇಲ್ಲಿ ಪ್ರಶ್ನೆ ಏನಿದೆ ಇವತ್ತು ತಾವು ನೋಡಿದಿರಿ ಪೇಪರ್ಸ್ ಲೇಡ್ ಮಾಡಬೇಕಾದರೆ ಮಿನಿಸ್ಟರ್ಸ್ ಬರಬೇಕು. ಒಬ್ಬರೇ ಮಂತ್ರಿಗಳು ಎಲ್ಲಾ ಪೇಪರ್ಸ್‌ಲೇ ಮಾಡಿದರು. ಮಂತ್ರಿಗಳ ಮನೆಗೆ ಅಜೆಂಡಾ ಹೋಗುತ್ತದೆಯೋ ಇಲ್ಲವೋ,

ಏಕೆ ಬರುವುದಿಲ್ಲ, ಮಂತ್ರಿಗಳು ಏನು ಮಾಡುತ್ತಾರೆ ? Please enquire what the Ministers are doing.

ಇವತ್ತು ಎಲ್ಲಾ ಪೇಪರ್ಸ್ ಲೇ ಮಾಡಿದ್ದುದು ಇಂಡಸ್ಟ್ರಿ ಮಿನಿಸ್ಟರ್. ಒಂದು ಡಜನ್ ಮಿನಿಸ್ಟರ್ಸ್ ಎಲ್ಲಿ ಹೋಗಿದ್ದಾರೆ. ಏನಾದರೂ ಫಂಕ್ಷನ್ಸ್ ಇಟ್ಟುಕೊಂಡಿದ್ದಾರೋ ? ಛೇಂಬರ್‌ನಲ್ಲಿದ್ದಾರೋ ಇಲ್ಲ ಮನೆಯಲ್ಲಿದ್ದಾರೋ ? ಮನೆಗೆ ಅಜೆಂಡಾ ಹೋಗುತ್ತದೆ. ಅಜೆಂಡಾ ಪ್ರಕಾರ ಕೆಲಸ ಮಾಡಬೇಕು ಅಷ್ಟೇ ಅಲ್ಲ ಈ ಸದನದ ಕೋರಂ ಆಗಬೇಕಾದರೆ 10.15 ನಿಮಿಷ ಬೆಲ್ ಹೊಡೆಯಿತು. ಮಂತ್ರಿಗಳು 40 ಜನ ಇದ್ದಾರೆ. ಅವರು ಬಂದರೆ ಸಾಕು ಕೋರಂ ಆಗುತ್ತದೆ. ಅದಕ್ಕೆ ತಾವು ಅವಕಾಶ ಕೊಡುತ್ತಿಲ್ಲ, ಅವರಿಗೆ ಜವಾಬ್ದಾರಿ ಇದೆಯೇ ?

ಶ್ರೀ ಬಿ.ಎಚ್. ಬನ್ನಿಕೋಡ್:– ಈ ಸದನವನ್ನು ಅವರು ಲಘುವಾಗಿ ತೆಗೆದುಕೊಂಡಿದ್ದಾರೆ.

ಶ್ರೀ ಎಸ್.ಎಚ್. ಕೌಜಲಗಿ:– ಈ ಸದನಕ್ಕೆ ಸ್ವಲ್ಪವೂ ಕಿಮ್ಮತ್ತು ಇಲ್ಲ.

(ಗೊಂದಲ)

ಅಧ್ಯಕ್ಷರು:- ಸೂಕ್ತ ಏರ್ಪಾಡು ಮಾಡುತ್ತೇನೆ. I will tell them.

SRI BASAVARAJ RAYAREDDY:– With due respect I am asking, please take action against the Ministers.

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೇ ಟಿ.ಎ.ಪಿ.ಸಿ.ಎಂ.ಎಸ್. ಹಿರೇಕೆರೂರು ತಾಲ್ಲೂಕು ಮಾಸೂರಿನಲ್ಲಿ ರಾತ್ರಿ 8–30 ಗಂಟೆ ದಿನಾಂಕ 5–3–93ರಲ್ಲಿ ಮೂರು ಚೀಲ ಸಕ್ಕರೆ ತೆಗೆದುಕೊಂಡು ಹೋಗತಕ್ಕಂಥ ಸಂದರ್ಭದಲ್ಲಿ ಕದ್ದು ಮಾರಾಟ ಮಾಡಲು ಹೋದಂತಹ ಸಂದರ್ಭದಲ್ಲಿ ಅಲ್ಲಿನ ಉತ್ಸಾಹಿ ಯುವಕರು ಬಂದು ಅವನ ಬೆನ್ನು ಹತ್ತಿ ಎಲ್ಲಿ ಹೋಗುತ್ತಿದೆ ಸಕ್ಕರೆ ನೋಡೋಣ ಅಂತ ಹೇಳಿ ಹೋದರು. ಅವರು ಯಾವುದೋ ಒಂದು ಖಾಸಗಿ ಅಂಗಡಿಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡುವಂತಹ ಸಂದರ್ಭದಲ್ಲಿ ಆ ಯುವಕರು ಹೋಗಿ ಆ ಸಕ್ಕರೆಯನ್ನು ಹಿಡಿದರು. ಸಕ್ಕರೆ ಹಿಡಿದ ಮೇಲೆ ಹಿರೇಕೆರೂರು ಪೊಲೀಸ್ ಸ್ಟೇಷನ್‌ಗೆ ಫೋನ್ ಮಾಡತಕ್ಕಂಥ ಪ್ರಯತ್ನ ಮಾಡಿದರು. ಆದರೂ ಫೋನ್ ಸಿಗಲಿಲ್ಲ. ಅಲ್ಲಿನ ಮಂಡಲ ಪಂಚಾಯತ್ ಸೆಕ್ರೆಟರಿ ಬಂದು ಇದು ಸತ್ಯ ಇದೆ. 3 ಚೀಲ ಸಕ್ಕರೆಯನ್ನು ನಾನು ಮಂಡಲ ಪಂಚಾಯತ್ ಕಾರ್ಯಾಲಯದಲ್ಲಿ ಇಟ್ಟುಕೊಳ್ಳುತ್ತೇನೆ. ಬೆಳಿಗ್ಗೆ ಇವರ ಬಗ್ಗೆ ಪೂರ್ಣ ತನಿಖೆ ಮಾಡುವಂತಹ ಪ್ರಯತ್ನ ಮಾಡೋಣ ಎಂದು ಹೇಳಿ ಆ ಮೂರು ಚೀಲ ಸಕ್ಕರೆಯನ್ನು ಮಂಡಲ ಪಂಚಾಯತಿ ಮಾಜಿ ಕಾರ್ಯದರ್ಶಿಗಳು ಹೇಳಿದ ಮೇಲೆ ಅವುಗಳನ್ನು ತೆಗೆದುಕೊಂಡು ಹೋಗಿ 3 ಚೀಲ ಸಕ್ಕರೆ ಮಾಸೂರಿನಲ್ಲಿ ಇಟ್ಟುಕೊಂಡರು. ಇಲ್ಲಿ ಒಂದು ಆಶ್ಚರ್ಯಪಡತಕ್ಕಂಥ ವಿಚಾರ ಏನೆಂದರೆ ಅದಕ್ಕೆ ನಾನು ಸವಾಲಾಗಿ ತೆಗೆದುಕೊಂಡು ಸ್ವೀಕಾರ ಮಾಡಬೇಕೆಂದು ಹೇಳಿದ್ದು. ಬೆಳಿಗ್ಗೆ ಆ 3 ಚೀಲ ಸಕ್ಕರೆ ಕಳ್ಳತನವಾಗಿದೆ. ಎಷ್ಟು ಅನ್ಯಾಯ ನೋಡಿ. ಆ ಉತ್ಸಾಹಿ ಯುವಕರು ಕಷ್ಟಪಟ್ಟು ಹಿಡಿದರು. ಮಂಡಲ ಪಂಚಾಯತಿ ಕಾರ್ಯದರ್ಶಿಗಳು ತಮ್ಮ ಕಾರ್ಯಾಲಯದಲ್ಲಿ 3 ಚೀಲ ಸಕ್ಕರೆಯನ್ನು ಇಟ್ಟುಕೊಂಡರು. ಆದರೆ ಮಾರನೇ ದಿನ ಬೆಳಿಗ್ಗೆ ಅದು ಕಳ್ಳತನ ಆಗಿದೆ. ಅವರು ಹೇಳಿದ್ದರು ಇವರ ಬಗ್ಗೆ ತನಿಖೆ ಮಾಡೋಣ ಸಂಬಂಧಪಟ್ಟವರ ಮೇಲೆ ಆಕ್ಷನ್ ತೆಗೆದುಕೊಳ್ಳೋಣ ಎಂದು ಯೋಚನೆ ಮಾಡುತ್ತಿರಬೇಕಾದರೆ ಬೆಳಿಗ್ಗೆ 3 ಚೀಲ ಸಕ್ಕರೆ ಕಳ್ಳತನವಾಗಿದೆ. ಆಮೇಲೆ ಇಡೀ ಊರಿನ ಜನ ಮಾಸೂರಿನ ಜನ ಹೆಣ್ಣು ಮಕ್ಕಳು ಎಲ್ಲರೂ ಕೂಡಿ ಮಂಡಲ ಪಂಚಾಯತಿ ಕಾರ್ಯಾಲಯದ ಮುಂದೆ ಕುಳಿತರು. ಈ ರೀತಿ ಅನ್ಯಾಯ ಹೊಸದೇನೂ ಅಲ್ಲ, ಇವರು ಶಿಕ್ಷಾಪಟ್ಟೆ ಕದ್ದು ಮಾರಾಟ ಮಾಡುತ್ತಾರೆ. ತನಿಖೆ

ಆಗಬೇಕೆಂದು ಧರಣಿ ಮಾಡಿದರು. ಆಮೇಲೆ ಕಂಪ್ಲೇಂಟ್ ಕೊಟ್ಟರು. ಮತ್ತೆ ಮಂಡಲ ಪಂಚಾಯತಿ ಕಾರ್ಯದರ್ಶಿಗಳಿಂದ ಪತ್ರ ಬರೆಸಿಕೊಂಡಿದ್ದಾರೆ. ಅದರ ಕಾಪಿ ಇದೆ. 3 ಚೀಲ ಸಕ್ಕರೆ ಇಲ್ಲಿ ಬಂದಿದೆ ಅಂತ. ಗ್ರಾಮಸ್ಥರು ದೂರು ಕೊಟ್ಟಿರುವ ಕಾಪಿ ಕೂಡ ಇದೆ. ಆದರೆ ಹಿರೇಕೆರೂರು ಪೊಲೀಸ್ ಸ್ಟೇಷನ್‌ನಲ್ಲಿ ಆ ಕಾಪಿ ಕೊಡುವುದಿಲ್ಲವೆಂದು ಹೇಳುತ್ತಾರೆ.

ಏನು ನಡೆಯುತ್ತಿದೆ ಈ ರಾಜ್ಯದಲ್ಲಿ ? ಈ ರೀತಿ ಕಳ್ಳತನವಾಗಿ ಹೋಗುತ್ತಿದ್ದರೂ ಕೂಡ ಸರ್ಕಾರ ಸುಮ್ಮನೆ ಇದೆ. ಉತ್ಸಾಹಿ ಯುವಕರು ತಮ್ಮ ಜೀವವನ್ನು ಪಣವಾಗಿಟ್ಟು ಚಾಲೆಂಜ್ ರೀತಿಯಲ್ಲಿ ತೆಗೆದುಕೊಂಡು ಹಿರೇಕೆರೂರಿನಲ್ಲಿ ಪ್ರಯತ್ನ ಮಾಡಿ 3 ಚೀಲ ಸಕ್ಕರೆಯನ್ನು ಹಿಡಿದುಕೊಟ್ಟರು. ಆ 3 ಚೀಲ ಸಕ್ಕರೆ ಎಲ್ಲಿ ಹೋಯಿತು ? ಅದು ಪತ್ತೆ ಇಲ್ಲ. ಈ ರೀತಿ ಇಡೀ ರಾಜ್ಯದಲ್ಲಿ ನಡೆಯುತ್ತಿದೆ. ಈ ತರಹ ಉತ್ಸಾಹಿ ಯುವಕರು ಕಷ್ಟಪಟ್ಟು ಕಳ್ಳತನವನ್ನು ಹಿಡಿದಾಗ ಅವರಿಗೆ ಸರ್ಕಾರ ಪ್ರೋತ್ಸಾಹ ಕೊಡಬೇಕು. ಪ್ರೋತ್ಸಾಹ ಕೊಟ್ಟರೆ ರಾಜ್ಯದ ಎಲ್ಲಾ ಯುವಕರಿಗೂ ಪ್ರೋತ್ಸಾಹ ಬಂದು ಒಳ್ಳೆಯ ಕೆಲಸವನ್ನು ಮಾಡುತ್ತಾರೆ. ಅದು ಬಿಟ್ಟು ಸರ್ಕಾರ ಇದರ ಬಗ್ಗೆ ತಾತ್ಸಾರ ಮಾಡಿದೆ. 5-3-93ರಿಂದ ಅಲ್ಲಿ ಹೆಣ್ಣು ಮಕ್ಕಳು ಮತ್ತು ಯುವಕರು ಇದರ ವಿರುದ್ಧ ಧರಣಿ ಕುಳಿತಿದ್ದಾರೆ, ಸರದಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅಲ್ಲಿಗೆ ತಹಶೀಲ್ದಾರ್ ಹೋಗಿಲ್ಲ, ಡಿ.ಸಿ.ಯವರು ಹೋಗಲಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದರೆ ಇಪತ್ತಿನವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಯುವಕರಾದ ಬಿ.ಆರ್. ಪರಪ್ಪನವರ್ ಮತ್ತು ಬಿ.ಎ. ಶೆಟ್ಟರ್ ಎನ್ನುವವರು ತಮ್ಮ ಜೀವವನ್ನು ಪಣವಾಗಿಟ್ಟು ಇದನ್ನು ಮಾಡಿದ್ದಾರೆ. ಇವತ್ತು ಅವರಿಗೆ ಜೀವದ ಬಗ್ಗೆ ಭಯ ಇದೆ. ಅಲ್ಲಿ ಹೋದ ತಕ್ಷಣ ಏನು ಮಾಡುತ್ತಾರೋ ಗೊತ್ತಿಲ್ಲವೆಂದು ಅವರು ಹೇಳುತ್ತಾರೆ. ಸರ್ಕಾರ ಇವರಿಗೆ ರಕ್ಷಣೆ ಕೂಡಾ ಕೊಡಬೇಕಾಗುತ್ತದೆ. ರಕ್ಷಣೆ ಕೊಡದಿದ್ದರೆ ಇನ್ನು ಮುಂದೆ ಯುವಕರು ಇಂಥ ಕೆಲಸಕ್ಕೆ ರಾಜ್ಯದಲ್ಲಿ ಮುಂದೆ ಬರುವುದಿಲ್ಲ. ಅದಕ್ಕೋಸ್ಕರ ತಕ್ಷಣ ಆ ಲೈಸನ್ಸ್‌ನ್ನು ರದ್ದುಪಡಿಸಿ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡಬೇಕು. ಮಾಸೂರಿನಲ್ಲಿ ಏನು ಕೃತ್ಯ ನಡೆದಿದೆ ? ಕಳ್ಳಸಾಗಾಣಿಕೆ ಏನು ನಡೆದಿದೆ ಅದರ ಬಗ್ಗೆ ಕ್ರಮ ತೆಗೆದುಕೊಂಡರೆ ಸರ್ಕಾರ ದಿಟ್ಟ ಹೆಜ್ಜೆ ಇಟ್ಟಂತಾಗುತ್ತದೆ. ಮಂಡಲ್ ಕಾರ್ಯದರ್ಶಿ ಮೇಲೂ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಕಾಳಸಂತೆಕೋರರನ್ನು ಹಿಡಿಯುವ ಯುವಕರ ಬೆನ್ನು ತಟ್ಟುತ್ತೇವೆಂದು ಸರ್ಕಾರ ಹೇಳಬೇಕು. ಇದರ ಬಗ್ಗೆ ಸರ್ಕಾರ ಏನು ಹೇಳುತ್ತದೆಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ:- ಮಾನ್ಯ ಅಧ್ಯಕ್ಷರೆ, ಮಾನ್ಯ ಆಹಾರ ಸಚಿವರ ಪರವಾಗಿ ಸನ್ಮಾನ್ಯ ಈಶ್ವರಪ್ಪನವರಿಗೆ ಸರ್ಕಾರದ ಉತ್ತರವನ್ನು ಕೊಡುತ್ತಿದ್ದೇನೆ.

ಶ್ರೀ ಮಾಟಾಳ್ ನಾಗರಾಜ್:- ಇವರು ಯಾವ ಇಲಾಖೆ ಮಂತ್ರಿಗಳು ? ಈ ಸದನದಲ್ಲಿ ಸಚಿವರು ಯಾರು ಏಂದು ಪರಿಚಯ ಮಾಡಲಿಲ್ಲ. ಉಪಮುಖ್ಯಮಂತ್ರಿಯವರು, ಧರ್ಮಸಿಂಗ್ ಮತ್ತು ಯಾಹ್ಮಾ ಅವರು ನಮಗೆ ಗೊತ್ತು. ನಿಮಗೆ ನಾನು ಅಗೌರವ ಮಾಡುತ್ತಿಲ್ಲ. ಸಚಿವರು ಯಾರು ಏಂದು ಇಮವರೆಗೂ ಸದನಕ್ಕೆ ಪರಿಚಯ ಮಾಡಿಸಲಿಲ್ಲ. ಇವರು ಯಾವ ಇಲಾಖೆಗೆ ಸೇರಿದವರು ? ದಯವಿಟ್ಟು ಸದನಕ್ಕೆ ತಿಳಿಸಿ ಕೊಡಬೇಕು.

ಶ್ರೀ ಎಸ್.ಎಂ. ಕೃಷ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ಆಹಾರ ಇಲಾಖೆ ಸಚಿವರು ವಿಧಾನಪರಿಷತ್ತಿನಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಇದ್ದಾರೆ. ಅವರ ಬದಲಾಗಿ ಮಾನ್ಯ ವಸಂತ ಸಾಲಿಯಾನ ಅವರು ಉತ್ತರ ಕೊಡುತ್ತಾರೆ.

ಶ್ರೀ ವಸಂತ ವಿ. ಸಾಲಿಯಾನ:- ಮಾನ್ಯ ಅಧ್ಯಕ್ಷರೆ, ದಿನಾಂಕ: 5-3-93ರಲ್ಲಿ 3 ಕ್ವಿಂಟಾಲ್ ಸಕ್ಕರೆಯನ್ನು ಗಾಡಿಗೆ ಹಾಕುತ್ತಿರುವ ಸಂದರ್ಭದಲ್ಲಿ, ಕೆಲವರು ಬಂದು ಈ ಸಕ್ಕರೆ ಚೀಲಗಳನ್ನು ತಮ್ಮ

ವಶಕ್ಕೆ ಪಡೆದು ಅದನ್ನು ಮಾಸೂರು ಮಂಡಲ ಪಂಚಾಯಿತಿ ಕಾರ್ಯದರ್ಶಿಯವರಿಗೆ ಕೊಟ್ಟಿರುತ್ತಾರೆ. ಅವರು ಅದನ್ನು ಮಂಡಲ ಪಂಚಾಯಿತಿ ಕಛೇರಿಯಲ್ಲಿ ಇಟ್ಟಿದ್ದಾಗ, ಅದೇ ದಿನ ರಾತ್ರಿ 9ಗಂಟೆಗೆ ಈ 3ಕ್ವಿಂಟಾಲ್ ಸಕ್ಕರೆ ಬಗ್ಗೆ ಸದರಿ ಮಂಡಲ ಪಂಚಾಯಿತಿ ಕಾರ್ಯದರ್ಶಿಗಳ ದೂರಿನ ಮೇಲೆ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ದಾಖಲು ಮಾಡಿಕೊಂಡಿದ್ದಾರೆ. ಅವರು ಈ ಬಗ್ಗೆ ವಿಚಾರಣೆ ನಡೆಸುತ್ತಿರುವುದು ತಿಳಿದು ಬಂದಿದೆ. ಈಗ ತಿಳಿದು ಬಂದಿರುವುದೇನೆಂದರೆ, ಈ ಸಕ್ಕರೆ ಸಾರ್ವಜನಿಕ ವಿತರಣೆಗೆ ಕಳುಹಿಸಿದ ಸಕ್ಕರೆಯಾಗಿರುವುದಿಲ್ಲ. ಇದು ಮುಕ್ತ ಮಾರುಕಟ್ಟೆಯ ಸಕ್ಕರೆಯಾಗಿರುತ್ತದೆ. ಕೆಲವು ಸಾರ್ವಜನಿಕರು ಇದನ್ನು ವಶಕ್ಕೆ ಪಡೆದು ಮಂಡಲ ಪಂಚಾಯಿತಿ ಕಾರ್ಯದರ್ಶಿ ವಶಕ್ಕೆ ಕೊಟ್ಟಿರುತ್ತಾರೆ. ಈ ಸಕ್ಕರೆ ಚೀಲಗಳು ರಾಣೆಬೆನ್ನೂರು ವ್ಯಾಪಾರಿಯಾದಂಥ ಶ್ರೀ ಮೂಳಗಿ ಎಂಬುವರಿಗೆ ಸೇರಿದ್ದುದು. ಇದರ ಬಗ್ಗೆ ವಿಚಾರ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಅಧ್ಯಕ್ಷರೆ, ತಾವು ನಮ್ಮ ರಕ್ಷಣೆಗೆ ಬರಬೇಕು. ಇದಕ್ಕೆ ನಮ್ಮ ಅಭ್ಯಂತರವೇನೂ ಇಲ. ಅಲ್ಲಿ ನ್ಯಾಯಬೆಲೆ ಅಂಗಡಿಯ ಸಕ್ಕರೆಯನ್ನು ಕಾಳಸಂತೆಯಲ್ಲಿ ಮಾರುವುದಕ್ಕೆ ಹೋದಾಗ ಅದನ್ನು ಹಿಡಿದು ಮಂಡಲ ಪಂಚಾಯಿತಿ ಕಾರ್ಯದರ್ಶಿ ವಶಕ್ಕೆ ಕೊಟ್ಟು ಅಲ್ಲೇ ಕಛೇರಿಯಲ್ಲಿ ಇಟ್ಟು ಬಂದಿದ್ದಾರೆ ಸ್ವಾಮಿ. ಯಾವುದೇ ವ್ಯಾಪಾರಿಗೆ ಇದು ಸಂಬಂಧಪಟ್ಟಿದ್ದಾದರೆ ಮಂಡಲ ಪಂಚಾಯಿತಿ ಕಾರ್ಯದರ್ಶಿ ವಶಕ್ಕೆ ಕೊಟ್ಟು ಅದನ್ನು ಕಛೇರಿಯಲ್ಲಿ ಇಟ್ಟುಕೊಳ್ಳುವ ಪ್ರಶ್ನೆ ಬರುವುದಿಲ್ಲ.

ನ್ಯಾಯಬೆಲೆ ಅಂಗಡಿಯಲ್ಲಿ ಇಂಥ ದುರುಪಯೋಗವಾಗುತ್ತಿದೆಯೆಂದು ದೂರು ಕೊಟ್ಟಾಗ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಇದು ಸಾರ್ವಜನಿಕ ವ್ಯಾಪಾರಸ್ಥನಿಗೆ ಇದು ಸಂಬಂಧಪಟ್ಟಿದ್ದಾದರೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಏನು ಬರುತ್ತದೆ ? ಇದರ ವಿರುದ್ಧ ಅಲ್ಲಿನ ಜನ ಸತ್ಯಾಗ್ರಹ ಮಾಡುವ ಪ್ರಶ್ನೆ ಏನು ಬರುತ್ತದೆ ? ಸನ್ಮಾನ್ಯ ಅಧ್ಯಕ್ಷರೆ ನಾನು ಸರ್ಕಾರದಲ್ಲಿ ವಿನಂತಿ ಮಾಡುತ್ತೇನೆ, ಇವತ್ತು ನೀವು ಇದಕ್ಕೆ ಬೆಂಬಲ ಕೊಡುತ್ತೀರೆಂದು ನಾವು ಹೇಳುವದಿಲ್ಲ. ಮಾಸೂರು ಜನ ಕಷ್ಟಪಟ್ಟು ಇದನ್ನು ಹಿಡಿದಿದ್ದಾರೆ. ಇಡೀ ಊರಿನ ಜನ ಅಲ್ಲಿ ಧರಣಿ ಕೂತಿದೆ. ಹೆಂಗಸರು, ಮಕ್ಕಳು ಅಲ್ಲಿ ಕೂತಿದ್ದಾರೆ. ಯಾರು ಇದನ್ನು ಹಿಡಿದರೋ ಅವರು ಮೂರು ದಿವಸದಿಂದ ಇಲ್ಲೇ ಕೂತಿದ್ದಾರೆ. ಈ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡರೆ ಬೇರೆ ಎಲ್ಲೂ ಈ ತರಹ ನಡೆಯುವುದಿಲ್ಲ ಎನ್ನುವ ಸದುದ್ದೇಶದಿಂದ ನಾವು ಪ್ರಸ್ತಾಪ ಮಾಡಿದ್ದೇವೆ. ಇದರ ಬಗ್ಗೆ ನಿಮ್ಮ ಅಧಿಕಾರಿಗಳು ಸರಿಯಾದ ಉತ್ತರ ಕೊಟ್ಟಿಲ್ಲ. ಕಳ್ಳತನವಾಗಿದೆಯೆಂದು ಸರ್ಕಾರ ಉತ್ತರ ಕೊಡುತ್ತದೆಯೇ ಸ್ವಾಮಿ ? ಈ ತರಹ ಉತ್ತರ ಕೊಡದೆ ದಯಮಾಡಿ ಜಿಲ್ಲಾಧಿಕಾರಿಗಳನ್ನು ತಕ್ಷಣ ಅಲ್ಲಿಗೆ ಕಳುಹಿಸಿ ತನಿಖೆ ಮಾಡಿಸಿ. ಈ ಸೊಸೈಟಿಯಲ್ಲಿರುವ ಮಾಲನ್ನು ಸೀಸ್ ಮಾಡಿಸಿ, ಎಷ್ಟು ಸಕ್ಕರೆ ಬಂದಿತ್ತು ? ಎಷ್ಟು ಸಕ್ಕರೆ ವಿತರಣೆಯಾಗಿದೆ ಎಂಬುದನ್ನು ತನಿಖೆ ಮಾಡಿದರೆ ಸಿಕ್ಕಿ ಬೀಳುತ್ತಾರೆ. ಈ ರೀತಿ ಕ್ರಮ ತೆಗೆದುಕೊಳ್ಳುವ ಬದಲು ಸಕ್ಕರೆ ಅದಕ್ಕೆ ಸಂಬಂಧಪಟ್ಟದ್ದಲ್ಲವೆಂದು ಉತ್ತರ ಕೊಟ್ಟರೆ ಹೇಗೆ ಸ್ವಾಮಿ ? ಇದು ತಲೆ ತಗ್ಗಿಸುವಂಥ ಉತ್ತರವಾಗುತ್ತದೆ. ದಯಮಾಡಿ ಜಿಲ್ಲಾಧಿಕಾರಿಗಳನ್ನು ಕಳುಹಿಸಿ ತನಿಖೆ ಮಾಡಿಸುತ್ತೇನೆಂದು ಸದನದಲ್ಲಿ ಹೇಳಿ. ಬಂದ ಸಕ್ಕರೆ ಏನಾಯಿತು ? ಇದರ ಅರ್ಥ ನೋಡಿದರೆ ಇದನ್ನು ಮುಚ್ಚಿಹಾಕುವಂಥ ಪ್ರಯತ್ನ ನಡೆದಿದೆ. ದಯಮಾಡಿ ಮಂಡಲ ಪಂಚಾಯಿತಿ ಕಾರ್ಯದರ್ಶಿಯನ್ನು ಇದರಲ್ಲಿ ಪಾರ್ಟಿ ಮಾಡಿ. ನ್ಯಾಯಬೆಲೆ ಅಂಗಡಿಯ ಲೈಸನ್ಸ್‌ನ್ನು ರದ್ದು ಮಾಡಿ. ಡಿ.ಸಿ.ಯವರು ಕೂಡಲೇ ಅಲ್ಲಿಗೆ ಹೋಗಿ ತನಿಖೆ ಮಾಡಲಿ. ಇದರ ಬಗ್ಗೆ ನಾಳೆ ಉತ್ತರ ಕೊಡಿ. ಈಗಲೇ ಉತ್ತರ ಕೊಡಬೇಕೆಂದು ನಾನು ಬೇಳುತ್ತಿಲ್ಲ.

ಶ್ರೀ ವಸಂತ ಬಿ. ಸಾಲಿಯಾನ:– ತುರ್ತಾಗಿ ದೂರವಾಣಿ ಮುಖಾಂತರ ಈ ಉತ್ತರವನ್ನು ತರಿಸಿದ್ದೇವೆ. ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಡೆಪ್ಯೂಟಿ ಕಮಿಷನರ್‌ರವರ ಮೂಲಕ ವಿಚಾರಣೆ ಮಾಡಿಸಿ ಉತ್ತರ ಬಂದ ತಕ್ಷಣ ಇದರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ನೌಕರರ ಹಾಗೂ ವಿದ್ಯಾರ್ಥಿಗಳ ಮುಷ್ಕರ

ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ):– ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದುಕೊಂಡು, ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ನೌಕರರು ಮತ್ತು ವಿದ್ಯಾರ್ಥಿಗಳು ಇವತ್ತು ಇಡೀ ರಾಜ್ಯಾದ್ಯಂತ ಮುಷ್ಕರ ಮಾಡುತ್ತಿದ್ದಾರೆ. ದಿನಾಂಕ: 24-2-93ರಿಂದ ಧರಣಿ, ಸತ್ಯಾಗ್ರಹ ಮಾಡುತ್ತಿದ್ದಾರೆ. 8-3-93ರಿಂದ ಸರದಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ ಮತ್ತು ಇವತ್ತು ವಿಧಾನಸೌಧ ಚಲೋ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಈ ವಿಚಾರದ ಬಗ್ಗೆ ನಾನು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಜೊತೆ ಮತ್ತು ಲೇಬರ್ ಮಿನಿಸ್ಟರ್ ಜೊತೆ ಚರ್ಚೆ ಮಾಡಿದ್ದೆ. ಅವರೂ ಸಹಾ ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯುತ್ತೇವೆಂದು ಹೇಳಿದ್ದರು. ಆದರೆ ಇದುವರೆಗೂ ಕೂಡಾ ಯಾವುದೂ ಪರಿಹಾರ ಕಂಡುಹಿಡಿದಿದ್ದು ಕಾಣಬರುತ್ತಿಲ್ಲ. ರಾಜ್ಯದಲ್ಲಿ 144 ಖಾಸಗಿ ಐಟಿಐಗಳು ಇವೆ. ಸರ್ಕಾರಿ ಐಟಿಐಗಳು 44 ಇವೆ. ಖಾಸಗಿ ಐಟಿಐಗಳನ್ನು ಗ್ರಾಂಟ್ ಇನ್ ಏಡ್ ಕೋಡ್‌ನಲ್ಲಿ ತಂದಿಲ್ಲ. ಅವುಗಳನ್ನು ಗ್ರಾಂಟ್ ಇನ್ ಕೋಡ್ ವ್ಯಾಪ್ತಿಗೆ ತರಬೇಕೆಂದು ಅವರ ಬೇಡಿಕೆ. ಹಾಗಾಗಿ ಅದರ ಬಗ್ಗೆ ವಿಧಾನಸೌಧ ಚಲೋ ಕಾರ್ಯಕ್ರಮ ಮಾಡುತ್ತೇವೆಂದು ಹೇಳಿದಾಗ ಅಲ್ಲಲ್ಲೇ ಅವರನ್ನು ತಡೆದುಬಿಟ್ಟಿದ್ದಾರೆ. ಅವರು ಬೆಂಗಳೂರಿಗೆ ಮುಟ್ಟಲಿಕ್ಕೇ ಕೊಟ್ಟಿಲ್ಲ. ಅವರ ಮೇಲೆ ಅರೆಸ್ಟ್‌ಕೆರೆಯಲ್ಲಿ ಲಾಠಿಚಾರ್ಜ್ ಮಾಡಿದ್ದಾರೆ. ಖಾಸಗಿ ಐಟಿಐಗಳಲ್ಲಿ 1504 ಇನ್‌ಸ್ಟ್ರಕ್ಟರ್‌ಗಳು ಕೆಲಸ ಮಾಡುತ್ತಿದ್ದಾರೆ. 10 ಸಾವಿರ ವಿದ್ಯಾರ್ಥಿಗಳು ಅಲ್ಲಿ ಕಲಿಯುತ್ತಿದ್ದಾರೆ. ಬಿಎ, ಬಿಕಾಂ ಗ್ರಾಜ್ಯುಯೇಟ್ ಆಗುವುದಕ್ಕಿಂತ ತಾಂತ್ರಿಕ ತರಬೇತಿ ಪಡೆಯುವುದು ಬಹಳ ಉತ್ತಮವಾಗಿದೆ. ತಾಂತ್ರಿಕ ಶಿಕ್ಷಣಕ್ಕೆ ಮಹತ್ವ ಕೊಡುವ ಅವಶ್ಯಕತೆ ಬಂದಿದೆ. ಸರ್ಕಾರವೂ ಸಹಾ ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಡುತ್ತದೆ ಎಂದು ಹೇಳಿದ ಮೇಲೆ, ಅದನ್ನು ಗ್ರಾಂಟ್ ಇನ್ ಏಡ್ ಕೋಡ್ ವ್ಯಾಪ್ತಿಗೆ ತರುವುದಕ್ಕೆ ಏನು ಕಷ್ಟ ಇದೆ ? ಇದನ್ನು ಸರ್ಕಾರ ಗ್ರಾಂಟ್ ಇನ್ ಏಡ್ ಕೋಡ್ ಒಳಗೆ ತರಬೇಕಾಗುತ್ತದೆ. ಮಾನ್ಯ ಸಚಿವರು ಮೇಲ್ಮನೆಯಲ್ಲಿ ಉತ್ತರ ಕೊಡುವಾಗ ಗ್ರಾಂಟ್ ಇನ್ ಏಡ್ ಕೋಡ್‌ಗೆ ಇವುಗಳನ್ನು ತರಬೇಕಾದರೆ 30 ಕೋಟಿ ರೂಪಾಯಿ ಸರ್ಕಾರದಿಂದ ಕೊಡಬೇಕಾಗುತ್ತದೆಂದು ಹೇಳಿದ್ದಾರೆ. ನನಗೆ ಗೊತ್ತಿದ್ದ ಹಾಗೆ 30 ಕೋಟಿ ರೂಪಾಯಿಗಳಾಗುವುದಿಲ್ಲ. ಅಧಿಕಾರಿಗಳು ತಪ್ಪು ಕಲ್ಪನೆಯಿಂದ ಇದನ್ನು ಹೇಳಿದ್ದಾರೆ. ಲೆಕ್ಕದ ಪ್ರಕಾರ ಹೇಳುವುದಾದರೆ, ರಾಜ್ಯದಲ್ಲಿ 144 ಖಾಸಗಿ ಐಟಿಐಗಳು ಇವೆ. ಪ್ರತಿಯೊಂದು ಐಟಿಐ ನಲ್ಲಿ 7 ಟ್ರೇಡ್ ಇದ್ದರೆ, ಒಂದು ಟ್ರೇಡ್‌ಗೆ 2 ಲಕ್ಷ ರೂಪಾಯಿ ಬೇಕಾಗುತ್ತದೆ. ಸ್ಯಾಲರಿ, ರಾ–ಮೆಟೀರಿಯಲ್ ಎಲ್ಲಾ ಸೇರಿ. ಅಂದರೆ ಟೋಟಲ್ 395 ಟ್ರೇಡ್ಸ್ ಇವೆ. ಇದನ್ನು ಲೆಕ್ಕ ಹಾಕಿದರೆ 7 ಕೋಟಿ ರೂಪಾಯಿ ಮೇಲೆ ಸರ್ಕಾರಕ್ಕೆ ಬರುವುದಿಲ್ಲ ಮತ್ತು ತಾಂತ್ರಿಕ ಶಿಕ್ಷಣಕ್ಕೂ ಆದ್ಯತೆ ಕೊಟ್ಟ ಹಾಗೆ ಆಗುತ್ತದೆ. ಇವತ್ತು ಪ್ರೈವೇಟ್ ಐಟಿಐಗಳಲ್ಲಿ ಒಬ್ಬ ವಿದ್ಯಾರ್ಥಿಗೆ ಎರಡು ವರ್ಷಕ್ಕೆ 6 ಸಾವಿರ ಫೀ ತೆಗೆದುಕೊಳ್ಳುತ್ತಾರೆ.

ವಿದ್ಯಾರ್ಥಿಗಳ ಫೀಜು ಬಹಳ ಹೆಚ್ಚಾಗಿದೆ. ಇದರಲ್ಲಿ ಸರ್ಕಾರ ಇಂಟರ್‌ಪಿನ್ ಆಗಿಲ್ಲವೆಂದರೆ ತಾಂತ್ರಿಕ ಎಜ್ಯುಕೇಶನ್ ಏನಿದೆ ಅದರ ಮೇಲೂ ಪರಿಣಾಮವಾಗುತ್ತದೆ. ಇವತ್ತು ಎಲ್ಲಾ ನೌಕರರುಗಳಿಗೆ ಗ್ರಾಂಟ್‌ಅನ್ನು ಕೊಡುವ ಬದಲು ಸ್ಯಾಲರಿಯನ್ನು ಕೊಡುವ ವ್ಯವಸ್ಥೆಯಾಗಬೇಕು. ಅವರಿಗೆ ರಾ ಮೆಟೀರಿಯಲ್ ಕೊಡುವ ವ್ಯವಸ್ಥೆ ಈ ಸರ್ಕಾರದಿಂದ ಆಗಬೇಕು. ಒಂದು ಟ್ರೇಡ್‌ಗೆ 16 ಜನ ವಿದ್ಯಾರ್ಥಿಗಳಿಗೆ ಮಾತ್ರ ನಾವು ಅಡ್ಮಿಷನ್ ಮಾಡಿಕೊಳ್ಳುತ್ತೇವೆ. ಅದಕ್ಕಾಗಿ ಹೆಚ್ಚಿನ ಫೀಜನ್ನು